

ಶುದ್ಧ ಬಿಳಿ ಸೀರೆ ಉಟ್ಟುಕೊಂಡು ಬೆಳಂಬೆಳಗ್ಗೆಯೇ ಚಂದ್ರಾಲೇನಿನ ಜೋಪಡಿಪಟ್ಟಿಯಿಂದ ಬಂದರೂ ಆ ಕೊಳೆಗೇರಿ ವಾಸನೇನ ದೇಹದಿಂದ ದೂರ ಮಾಡೋಕೆ ಸಾಧ್ಯವೇ? ಎಷ್ಟು ಉಜ್ಜಿದರೂ, ಕಣ್ಣ ಸುತ್ತ ಇರುವ ಕಪ್ಪು ಕುಳಿನಾ ತೆಗೆಯೋಕಾಗುತ್ತೇ? ಒಡೆದ ಹಿಮ್ಮಡಿಯ ನಡುವಿನ ಅಲ್ತಾ (ಪಾದಕ್ಕೆ ಹಚ್ಚುವ ಕೆಂಪು ಬಣ್ಣ) ತೊಳೆಯೋಕಾಗುತ್ತೇ?

ಆದರೂ, ಜೋಪಡಿಪಟ್ಟಿಯ ಕೊಳಕು ಸಂದಿ ದಾಟಿ ರಂಜಾವತಿ ದೀದಿಮೋನಿ ಮನೆಗೆ ಬರೋದು ಅಂದ್ರೆ ಸುಮತಿಗೆ ಇಷ್ಟ.

ಅದಕ್ಕೂ ಇನ್ನು ಹೆಚ್ಚಿನ ಖುಷಿ ವಿಷಯ ಅಂದ್ರೆ, ರಂಜಾವತಿ ದೀದಿ ಹೇಗೆ ತನ್ನ ಚಿಕ್ಕ ಸಂಸಾರವನ್ನು ಅಚ್ಚುಕಟ್ಟಾಗಿ ನಿಭಾಯಿಸ್ತಾಳೆ ಅನ್ನೋದನ್ನ ನೋಡೋದು.

ಆಮೇಲೆ, ಸಂಜೆಯಾದಾಗ ಎಲ್ಲಾ ಕೆಲಸ ಮುಗಿಸಿ ರಂಜಾವತಿ ಬೆಡ್‌ರೂಮಿನ ಎದುರಿರುವ ಪುಟ್ಟ